ಅ) ಆನೇಕಲ್ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಬೇಗೂರು ಹೋಬಳಿಯ ಬೇಗೂರಿನಲ್ಲಿ ಆರೋಗ್ಯ ಕೇಂದ್ರ ಕಟ್ಟಡ ಮಂಜೂರಾಗಿರುವುದು ನಿಜವೇ;

ಆ) ಹಾಗಿಲ್ಲದಿದ್ದಲ್ಲಿ, ಸದರಿ ಗ್ರಾಮದಲ್ಲಿ ಕಟ್ಟಡದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲು ಯೋಜನೆಯನ್ನು ರೂಪಿಸಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ಮಂಜೂರಾಗಿರುವುದಿಲ್ಲ

ಆ) ಬರೆದಿದೆ

ಇ) ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣವನ್ನು (ಹೆಚ್‌ಎನ್‌ಪಿ) ಯೋಜನೆಯಡಿಯಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

ರಾಜ್ಯದಲ್ಲಿ ಗ್ರಾಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿಗಳ ಕಾಮಗಾರಿಗಳು

3576 (4073) ಶ್ರೀ ನಾರಾಯಣ ಸ್ವಾಮಿ ಎ (ಆನೇಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರತಿ ಗ್ರಾಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ 2001–02 ರಿಂದ 2003–04 ಸಾಲಿನವರೆಗೆ ಬಿಡುಗಡೆಯಾದ ಹಣವೆಷ್ಟು; ವಿವರ ನೀಡುವುದು;

ಆ) ಸದರಿ ಗ್ರಾಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗಳಿಗೆ 2001–02 ರಿಂದ 2003–04ರ ಸಾಲಿಗೆ ಎಸ್‌ಜಿಆರ್‌ವೈ ಯೋಜನೆಯಲ್ಲಿ ಬಿಡುಗಡೆಯಾಗಿರುವ ಹಣವೆಷ್ಟು;

ಇ) ಸದರಿ ಯೋಜನೆಯಲ್ಲಿ ರಸ್ತೆ ಡಾಂಬರೀಕರಣ ಕಟ್ಟಡ ಇತ್ಯಾದಿ ಕಾಮಗಾರಿಗಳು ಕೈಗೊಳ್ಳದಿರಲು ಸರ್ಕಾರ ತೀರ್ಮಾನ ಕೈಗೊಂಡಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಗ್ರಾಮೀಣ ಭಾಗದಲ್ಲಿ ರಸ್ತೆ ಡಾಂಬರೀಕರಣಕ್ಕೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ ರಾಜ್ ಸಚಿವರು):

ಅ) ಪ್ರತಿ ಗ್ರಾಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಹಣ ಬಿಡುಗಡೆ ಮಾಡಲಾದ ವಿವರಗಳು ಈ ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ವರ್ಷ	ಪ್ರತಿ ಗ್ರಾಮ ಪಂಚಾಯತ್ (ಸರಾಸರಿ)	ಪ್ರತಿ ತಾಲ್ಲೂಕು ಪಂಚಾಯತ್ (ಸರಾಸರಿ)
2001–02	5.39	1367.00
2002–03	6.79	1339.00
2003–04 (ಜೂನ್ ಅಂತ್ಯದವರೆಗೆ)	1.20	365.00

ಆ) ಎಸ್‌ಜಿಆರ್ ವೈ ಯೋಜನೆಯಡಿ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗಳಿಗೆ 2001–02 ರಿಂದ 2003–04 ರ ಸಾಲಿನವರೆಗೂ ಬಿಡುಗಡೆಯಾಗಿರುವ ಹಣದ ವಿವರಗಳು ಈ ಮುಂದಿನಂತೆ ಒದಗಿಸಿದೆ.

ಹಣ ಬಿಡುಗಡೆಯ ವಿವರಗಳು

ವರ್ಷ	ಜಿಲ್ಲಾ ಪಂಚಾಯತಿ	ತಾಲ್ಲೂಕು ಪಂಚಾಯತಿ	ಗ್ರಾಮ ಪಂಚಾಯತಿ
2001–02	3871.30	5806.95	9986.04
2002–03	4640.80	6961.20	10864.00
2003–04 (ಜೂನ್‌ವರೆಗೂ)	2216.40	3324.60	4876.00

ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಮೂಲಕ ಬಿಡುಗಡೆ ಮಾಡುತ್ತದೆ. ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಜಿಲ್ಲಾ ಪಂಚಾಯತಿಗಳಿಂದ ಅನುದಾನ ಬಿಡುಗಡೆಯಾಗುತ್ತದೆ.

ಇ) ಕೇಂದ್ರ ಸರ್ಕಾರವು ನೀಡಿರುವ ಮಾರ್ಗಸೂಚಿಗಳ ಪ್ರಕಾರ ರಸ್ತೆ ಡಾಂಬರೀಕರಣಕ್ಕೆ ಅವಕಾಶವಿರುವುದಿಲ್ಲ ಮತ್ತು ಅನುಮತಿಸುವುದಿಲ್ಲ.

ಈ) ಸರ್ಕಾರವು ಗ್ರಾಮೀಣ ಭಾಗದಲ್ಲಿ ರಸ್ತೆ ಡಾಂಬರೀಕರಣಕ್ಕೆ ಆರ್‌ಐಡಿಎಫ್, ಪ್ರಧಾನ ಮಂತ್ರಿ ಗ್ರಾಮ ಸಡಕ್ ಮತ್ತು ಲೆಕ್ಕಶೀರ್ಷಿಕೆ 3054–ರಾಜ್ಯದ ಯೋಜನಾ ನಿಧಿ ಯೋಜನೆಗಳಲ್ಲಿ ಕೈಗೊಳ್ಳಲು ಅವಕಾಶ ಮಾಡಿರುತ್ತದೆ.

ಅಧಿಭಾರ ಶುಲ್ಕವನ್ನು ಬೇರ್ಪಡಿಸಿ ಗ್ರಾಮ ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಮತ್ತು ಪಟ್ಟಣ ಪಂಚಾಯ್ತಿ ಪುರಸಭೆಗಳಿಗೆ ಕೊಡುವ ಬಗ್ಗೆ

3577(3493) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಈಗಾಗಲೇ ರಾಜ್ಯ ವ್ಯಾಪ್ತಿ ತಾಲ್ಲೂಕ್ ಪಂಚಾಯತಿಗಳಿಗೆ ನಿಯೋಜಿಸಿರುವ ಅಧಿಭಾರ ಶುಲ್ಕ (ಸ್ಟ್ಯಾಂಪ ಡ್ಯೂಟಿ ಹಣವನ್ನು) ವನ್ನು ಬೇರ್ಪಡಿಸಿ ಗ್ರಾಮ ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ಮತ್ತು ಪಟ್ಟಣ ಪಂಚಾಯ್ತಿ, ಪುರಸಭೆಗಳಿಗೆ ಕೊಡುವ ಯೋಜನೆ ಇದೆಯೇ;

ಆ) ಈ ರೀತಿ ಅಧಿಭಾರ ಶುಲ್ಕವನ್ನು ತಾಲ್ಲೂಕ್ ಪಂಚಾಯ್ತಿಯಿಂದ ಬೇರ್ಪಡಿಸಿದಲ್ಲಿ ಕಾರ್ಯವ್ಯಾಪ್ತಿ ಕಾಮಗಾರಿಗಳು ಕಡಿಮೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರೀತಿ ಬದಲಾವಣೆ ಮಾಡುವ ಬದಲು ತಾಲ್ಲೂಕು ಪಂಚಾಯ್ತಿಯನ್ನು ರದ್ದುಪಡಿಸಬಾರದೇಕೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಇಲ್ಲ

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ